ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರ ಕ್ಷೇತ್ರ) ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

ವಿಷಯ: ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರ ಕ್ಷೇತ್ರ) ಇವರು ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ನಿರ್ಮಾಣವಾದ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಭೂಮಿಯನ್ನು ಕಳೆದುಕೊಂಡ ಸಂತ್ರಸ್ಥರಿಗೆ ಭೂ-ಪರಿಹಾರ ಧನವನ್ನು ಕಳೆದ 4 ತಿಂಗಳಿನಿಂದ ವಿತರಿಸದೇ ಇರುವುದರಿಂದ ಆ ಭಾಗದ ಸಂತ್ರಸ್ಥರಿಗೆ ಆಗುವ ತೊಂದರೆಗಳ ಕುರಿತು ಮತ್ತು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕೇಂದ್ರಗಳಲ್ಲಿ ಮಂಜೂರಾದ ಕಾಮಗಾರಿಗಳನ್ನು ಪ್ರಾರಂಭಿಸದಿರುವುದರಿಂದ ಸಂತ್ರಸ್ಥರಿಗೆ ಆಗುತ್ತಿರುವ ತೊಂದರೆಗಳ ಕುರಿತು.

***

ಉತ್ತರಗಳು:

1. **ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರ ಭೂಸ್ವಾಧೀನ ಕುರಿತು:**

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರ ಅನುಷ್ಠಾನಕ್ಕಾಗಿ ಹಂಚಿಕೆಯಾದ 130.00 ಟಿ.ಎಂ.ಸಿ. ನೀರಿನ ಬಳಕೆಗಾಗಿ ಆಲಮಟ್ಟಿ ಜಲಾಶಯದ ಸಂಗ್ರಹಣೆ ಮಟ್ಟ ಆರ್.ಎಲ್.519.50 ಮೀ. ನಿಂದ ಆರ್.ಎಲ್.524.256 ಮೀ.ಗೆ ಎತ್ತಿರುಸುವುದು ಒಳಗೊಂಡಿರುತ್ತದೆ. ಯೋಜನೆಯಡಿ ಹೊಸ ಭೂಸ್ವಾಧೀನ ಕಾಯ್ದೆ ರನ್ವಯ ಭೂಸ್ವಾಧೀನಗೊಳಿಸಬೇಕಾಗಿರುವ ಜಮೀನುಗಳ ವಿವರ ಹಾಗೂ ಇದುವರೆಗೂ ಭೂಸ್ವಾಧೀನಕ್ಕೊಳಪಟ್ಟಿರುವ ಜಮೀನುಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ | ವಿವರ | ಒಟ್ಟು (ಎಕರೆ) | ಇದುವರೆಗೂ ಭೂಸ್ವಾಧೀನ ಪಡಿಸಿಕೊಂಡಿರುವ ಭೂಮಿ (ಎಕರೆ) |
|---|---|---|---|
| 1 | 188 ಗ್ರಾಮಗಳಿಗೆ ಸಂಬಂಧಿಸಿದಂತೆ ಮುಳುಗಡೆಯಾಗುವ ಜಮೀನು | 75,573 | 2,543 |
| 2 | 20 ಮುಳುಗಡೆ ಗ್ರಾಮಗಳು & ಬಾಗಲಕೋಟೆ ಪಟ್ಟಣ ಪುನರ್ ವಸತಿಗಾಗಿ | 6,467 | 3,393 |
| 3 | 9 ಯೋಜನೆಗಳು (ಕಾಲುವೆ ನಿರ್ಮಾಣ) | 51,837 | 21,247 |
| | ಒಟ್ಟು | **1,33,867** | **27,183** |

ಮುಂದುವರೆದು, ಮುಳುಗಡೆಯಾಗಲಿರುವ ಗ್ರಾಮಗಳ ಹಾಗೂ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ನಗರ ಪ್ರದೇಶಗಳ ಕಟ್ಟಡಗಳ 25,660 ಕಟ್ಟಡ/ಆಸ್ತಿಗಳ ಪೈಕಿ ಇಲ್ಲಿಯವರೆಗೆ 2464 ಕಟ್ಟಡಗಳನ್ನು/ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡು ಸಂಬಂಧಿಸಿದ ಕಟ್ಟಡಗಳ/ಆಸ್ತಿಗಳ ಮಾಲೀಕರಿಗೆ ಪರಿಹಾರಧನವನ್ನು ವಿತರಿಸಲಾಗಿದೆ.

ಸರ್ಕಾರದ ಆದೇಶ ದಿನಾಂಕ 25.01.2023ರಲ್ಲಿ ಹೊರಡಿಸಿರುವ ಒಪ್ಪಂದದ ಐತೀರ್ಪಿನ (Consent Award) ಆದೇಶದನ್ವಯ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ. 20.00 ಲಕ್ಷ ಮತ್ತು ನೀರಾವರಿ ಜಮೀನಿಗೆ ಪ್ರತಿ ಎಕರೆಗೆ ರೂ.24.00 ಲಕ್ಷಗಳಂತೆ ಪರಿಹಾರ ಧನ ನಿಗಧಿಪಡಿಸಿದ್ದು, ಅದರನ್ವಯ ರೈತರಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಏಪ್ರಿಲ್-2023 ಹಾಗೂ ಮೇ-2023 ತಿಂಗಳಲ್ಲಿ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದಾಗ ರೂ.1054.36 ಕೋಟಿಗಳ ಪರಿಹಾರ ವಿತರಣೆಗಾಗಿ ಬಿಲ್ಲುಗಳು ಸ್ವೀಕೃತಗೊಂಡಿರುತ್ತವೆ. ಸದರಿ ಮೊತ್ತವು ಸೇರಿ ಪ್ರಸ್ತುತ ಐತೀರ್ಪು ಹಂತದಲ್ಲಿರುವ 8,617 ಎಕರೆ ಜಮೀನು ಹಾಗೂ 5,822 ಕಟ್ಟಡಗಳಿಗೆ ಐತೀರ್ಪು ರಚಿಸಿ ಪರಿಹಾರ ವಿತರಿಸಲು ಹಾಗೂ ನ್ಯಾಯಾಲಯದಲ್ಲಿರುವ ಭೂಸ್ವಾಧೀನ ಬಾಕಿ ಪ್ರಕರಣಗಳಿಗೆ ಪಾವತಿಸಲು, ಇತ್ಯಾದಿ ಒಳಗೊಂಡಂತೆ ಒಟ್ಟಾರೆ ರೂ. 5100.00 ಕೋಟಿಗಳ ಅವಶ್ಯಕತೆ ಇದ್ದು, ಪ್ರಸಕ್ತ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ರೂ.1,200 ಕೋಟಿ ಅನುದಾನವನ್ನು ಒದಗಿಸಲಾಗಿದ್ದು, ಭೂಪರಿಹಾರ ಒದಗಿಸಿ, ಜಮೀನುಗಳ ಭೂಸ್ವಾಧೀನ ಹಾಗೂ ಕಟ್ಟಡಗಳ ಸ್ವಾಧೀನತೆಗೆ ಕ್ರಮ ಜರುಗಿಸಲಾಗುವುದು.

**2) ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3 ರ ಪುನರ್ ವಸತಿ ಮತ್ತು ಪುನರ್ ನಿರ್ಮಾಣ:**

ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3 ರಡಿ ಆಲಮಟ್ಟಿ ಜಲಾಶಯದ ಗೇಟಿನ ಎತ್ತರವನ್ನು ಆರ್.ಎಲ್ 519.600ಮೀ. ದಿಂದ 524.256ಮೀ. ಗೆ ಎತ್ತರಿಸಿದಾಗ ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆಹೊಂದಲಿರುವ 20 ಗ್ರಾಮಗಳಿಗೆ, 24 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಪುನರ್ವಸತಿ ಕೇಂದ್ರಗಳ ನಿರ್ಮಾಣಕ್ಕೆ ಬೇಕಾಗುವ ಒಟ್ಟು ಜಮೀನು 4648ಎ-33ಗುಂಟೆ.

- 20 ಗ್ರಾಮಗಳ ಪೈಕಿ 9 ಗ್ರಾಮಗಳಿಗೆ 10 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದ್ದು, ಇದಕ್ಕಾಗಿ 1821ಎ-23ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಈಗಾಗಲೆ 10 ಪುನರ್ವಸತಿ ಕೇಂದ್ರಗಳಿಗೆ ಲೇಔಟ ನಕ್ಷೆಗೆ ಅನುಮೋದನೆ ಪಡೆದು ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.
- ಮುಳುಗಡೆ ಹೊಂದಲಿರುವ ಶಿರಬೂರ ಹಾಗೂ ಚಿಕ್ಕಗಲಗಲಿ ಗ್ರಾಮಗಳಿಗೆ ನಿರ್ಮಿಸಲಾಗುತ್ತಿರುವ 3 ಪುನರ್ವಸತಿ ಕೇಂದ್ರಗಳಾದ ಶಿರಬೂರ (ಮಹಾಲಬಾಗಾಯತ), ಚಿಕ್ಕಗಲಗಲಿ(ಮಹಾಲಬಾಗಾಯತ), ಶಿರಬೂರ ಭಾಗ ಮತ್ತು ಚಿಕ್ಕಗಲಗಲಿ ಭಾಗ (ಝುಂಜುರಕೊಪ್ಪ) ಪುನರ್ವಸತಿ ಕೇಂದ್ರಗಳಲ್ಲಿ ಲೇಔಟ ರಚನೆ ಕಾರ್ಯ ಅಂತಿಮ ಹಂತದಲ್ಲಿದ್ದು, ಆಂತರಿಕ ರಸ್ತೆಗಳ ಖಡೀಕರಣ, ಬದಿಚರಂಡಿ, ಅಡ್ಡಚರಂಡಿ, ಸಾರ್ವಜನಿಕ ಕಟ್ಟಡಗಳು, ಮೇಲ್ಮಟ್ಟದ ಜಲಸಂಗ್ರಹಾಲಯ ಕಾಮಗಾರಿಗಳು ಪ್ರಗತಿಯಲ್ಲಿವೆ.
- ಅಲ್ಲದೇ, 07 ಗ್ರಾಮಗಳಿಗೆ 07 ಪುನರ್ವಸತಿ ಕೇಂದ್ರಗಳಾದ ಅಂಕಲಗಿ, ಉದಗಟ್ಟಿ, ಕೊಪ್ಪ, ಎಸ್.ಕೆ. ಕುಂದರಗಿ, ಬಾವಲತ್ತಿ, ಚಿಕ್ಕೂರ ಮತ್ತು ಮಾಚಕನೂರ (ವಜ್ರಮಟ್ಟಿ ಭಾಗ) ಪುನರ್ವಸತಿ ಕೇಂದ್ರಗಳಿಗೆ ಲೇಔಟ ನಕ್ಷೆ ಅನುಮೋದನೆ ಪಡೆಯಲಾಗಿದ್ದು, ಈ ಎಲ್ಲ ಪುನರ್ವಸತಿ ಕೇಂದ್ರಗಳಲ್ಲಿ ನಿವೇಶನ ಗುರುತಿಸುವುದು, ಆಂತರಿಕ ರಸ್ತೆಗಳಿಗೆ ಬದಿಚರಂಡಿ, ಅಡ್ಡಚರಂಡಿ ಮತ್ತು ಕಿರು ನೀರು ಪೂರೈಕೆ ಯೋಜನೆ ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ.
- ಇನ್ನುಳಿದ, 11 ಮುಳುಗಡೆಹೊಂದುವ ಗ್ರಾಮಗಳನ್ನು ಸ್ಥಳಾಂತರಿಸಲು ಭೂಸ್ವಾಧೀನ ಪ್ರಕ್ರಿಯೆ ವಿವಿಧ ಹಂತಗಳಲ್ಲಿರುತ್ತವೆ.
- ಪ್ರಸಕ್ತ ಆರ್ಥಿಕ ವರ್ಷದಲ್ಲಿ ಅನುದಾನ ಲಭ್ಯತೆಗೆ ಅನುಗುಣವಾಗಿ ನಿಗದಿತ ಗುರಿ ಸಾಧಿಸಲು ಕ್ರಮ ವಹಿಸಲಾಗುವುದು.

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು

(ಜಸಂಇ 181 ಕೆಬಿಎನ್ 2023)